## ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀಮತಿ ಎಸ್. ವೀಣಾ ಅಚ್ಚಯ್ಯ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2811

ಉತ್ತರಿಸಬೇಕಾದ ದಿನಾಂಕ : 29-03-2022

ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೊಡಗು ಜಿಲ್ಲೆಯಲ್ಲಿ ಪ್ರಸ್ತುತ ಆರ್ಥಿಕ ವರ್ಷದಲ್ಲಿ ಸಹಕಾರ ಸಂಸ್ಥೆಗಳಿಂದ ಎಷ್ಟು ಮೊತ್ತದ ಸಾಲ ಸೌಲಭ್ಯಗಳನ್ನು ರೈತರಿಗೆ ಒದಗಿಸಲಾಗಿದೆ; | ಕೊಡಗು ಜಿಲ್ಲೆಯಲ್ಲಿ 2021-22 ನೇ ಸಾಲಿನಲ್ಲಿ ದಿನಾಂಕ: 28.02.2022 ರ ಅಂತ್ಯಕ್ಕೆ ಇದ್ದಂತೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಹಾಗೂ ಪಿಕಾರ್ಡ್ ಬ್ಯಾಂಕುಗಳ ಮುಖಾಂತರ 38,006 ರೈತರಿಗೆ ರೂ. 64,343.70 ಲಕ್ಷಗಳ ಅಲ್ಪಾವಧಿ ಬೆಳೆ ಸಾಲ, ಮಧ್ಯಮಾವಧಿ ಮತ್ತು ಧೀರ್ಘಾವಧಿ ಕೃಷಿ/ಕೃಷಿ ಸಂಬಂಧಿತ ಸಾಲ ಮತ್ತು ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಾಲ ಸೌಲಭ್ಯಗಳನ್ನು ಒದಗಿಸಲಾಗಿರುತ್ತದೆ. |
| ಆ) | ಪ್ರಸಕ್ತ ಆರ್ಥಿಕ ವರ್ಷದಲ್ಲಿ ಫಲಾನುಭವಿಗಳಿಗೆ ಸಾಲ ಪಡೆಯಲು ನಿಗದಿಪಡಿಸಿರುವ ಮಾನದಂಡ, ನಿಯಮ ಹಾಗೂ ಷರತ್ತುಗಳೇನು; (ಆದೇಶಗಳ ಪ್ರತಿ ಒದಗಿಸುವುದು) | ಫಲಾನುಭವಿ ರೈತರುಗಳಿಗೆ ಸಾಲ ಪಡೆಯಲು ನಿಗದಿಪಡಿಸಿರುವ ಮಾನದಂಡ, ನಿಯಮ ಹಾಗೂ ಷರತ್ತುಗಳು ಈ ಕೆಳಕಂಡಂತಿದೆ. |

| ಕ್ರ ಸಂ | ಸಾಲದ ವಿಧ | ಮಾನದಂಡ/ ನಿಯಮ/ಷರತ್ತುಗಳು |
|---|---|---|
| 1) | ರೈತರಿಗೆ ಪತ್ತಿನ ಸಹಕಾರಿ ಸಂಸ್ಥೆಗಳ ಮೂಲಕ ರೂ.3.00 ಲಕ್ಷಗಳವರೆಗೆ ಶೂನ್ಯ ಬಡ್ಡಿ ದರದಲ್ಲಿ ಸಾಲ ನೀಡುವ ಅಲ್ಪಾವಧಿ ಬೆಳೆ ಸಾಲ ಯೋಜನೆ ಹಾಗೂ ರೂ.2.00 ಲಕ್ಷಗಳವರೆಗೆ ಶೂನ್ಯ ಬಡ್ಡಿ ದರದಲ್ಲಿ ಪಶುಸಂಗೋಪನೆ ಮತ್ತು ಮೀನುಗಾರಿಕೆ ಚಟುವಟಿಕೆಗಳಿಗೆ ದುಡಿಯುವ ಬಂಡವಾಳವಾಗಿ ಸಾಲ ನೀಡುವ ಯೋಜನೆ: | ➢ ಬ್ಯಾಂಕುಗಳು/ಸಂಘಗಳು ಹೊಂದಿರುವ ಸಾಲದ ನಿಯಮಗಳ ರೀತ್ಯಾ ಅಲ್ಪಾವಧಿ ಬೆಳೆ ಸಾಲ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಾಲ ಪಡೆಯಲು ರೈತನು ಸಂಬಂಧಿಸಿದ ಸಂಘದ ಕಾರ್ಯವ್ಯಾಪ್ತಿಯ ವಾಸಿಯಾಗಿರಬೇಕು.<br>➢ ರೈತನು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಪಿಕಾರ್ಡ್ ಬ್ಯಾಂಕ್ ಅಥವಾ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳಲ್ಲಿ ಸದಸ್ಯತ್ವ ಹೊಂದಿರತಕ್ಕದ್ದು.<br>➢ ಆಧಾರ್ ಕಾರ್ಡ್ ಮತ್ತು ಆರ್‌ಟಿಸಿ ದಾಖಲೆಗಳೊಂದಿಗೆ ನಿಗದಿತ ಅರ್ಜಿ ನಮೂನೆಯಲ್ಲಿ ಸಂಬಂಧಿಸಿದ ಸಂಘಗಳಿಗೆ ಅರ್ಜಿ ಸಲ್ಲಿಸಬೇಕು. |

| | | | | |
|---|---|---|---|---|
| | | | | ಸದರಿ ಆರ್‌ಟಿಸಿ ಮೇಲೆ ಇತರೆ ಬ್ಯಾಂಕುಗಳಲ್ಲಿ ಬೆಳೆ ಸಾಲ ಪಡೆದಿರಬಾರದು.<br>➢ ಹೈನುಗಾರಿಕೆ ಉದ್ದೇಶಕ್ಕೆ ಸಾಲ ಪಡೆಯಲು ರೈತ/ಫಲಾನುಭವಿ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಹಾಲು ಪೂರೈಕೆ ಮಾಡುವುದು ಕಡ್ಡಾಯವಾಗಿರುತ್ತದೆ.<br>➢ ರೈತನು ಸಂಘವು ನಿಗದಿಪಡಿಸಿದ ಗಡುವಿನ ದಿನಾಂಕದೊಳಗೆ ಅಸಲು ಮರುಪಾವತಿಸಬೇಕು. |
| | | 2) | ರೈತರಿಗೆ ಪತ್ತಿನ ಸಹಕಾರಿ ಸಂಸ್ಥೆಗಳ ಮೂಲಕ ರೂ.10.00 ಲಕ್ಷಗಳವರೆಗೆ ಶೇ.3 ರ ಬಡ್ಡಿ ದರದಲ್ಲಿ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ/ಕೃಷಿ ಸಂಬಂಧಿತ ಸಾಲ ನೀಡುವ ಯೋಜನೆ: | ➢ ರೈತನು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಪಿಕಾರ್ಡ್ ಬ್ಯಾಂಕ್ ಅಥವಾ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳಲ್ಲಿ ಸದಸ್ಯತ್ವ ಹೊಂದಿರತಕ್ಕದ್ದು.<br>➢ ಭೂಮಿ ದಾಖಲೆಗಳು, ಭದ್ರತೆಗೆ ಬೇಕಾದ ದಾಖಲೆಗಳು ಮತ್ತು ಯೋಜನಾ ವರದಿಯೊಂದಿಗೆ ನಿಗದಿತ ನಮೂನೆಯಲ್ಲಿ ಸಂಬಂಧಿಸಿದ ಸಂಘಗಳಿಗೆ ಅರ್ಜಿ ಸಲ್ಲಿಸಬೇಕು.<br>➢ ರೈತನು ಸಂಘವು ನಿಗದಿಪಡಿಸಿದ ಗಡುವಿನ ದಿನಾಂಕದೊಳಗೆ ಅಸಲು ಮತ್ತು ಶೇ.3 ರ ಬಡ್ಡಿಯನ್ನು ಪಾವತಿಸಬೇಕು.<br>➢ ಒಂದು ಸಂಘಕ್ಕಿಂತ ಹೆಚ್ಚಿನ ಸಂಘದಲ್ಲಿ ಒಂದೇ ಉದ್ದೇಶಕ್ಕೆ ಸಾಲ ಪಡೆದಿರಬಾರದು. |
| ಇ) | ಇದುವರೆಗೂ, ಜಿಲ್ಲೆಯ ಪ್ರತಿ ಸಹಕಾರ ಸಂಸ್ಥೆಯ ಮೂಲಕ ವಿತರಣೆಯಾಗಿರುವ ಸಾಲ ಮತ್ತು ಸೌಲಭ್ಯಗಳ ವಿವರಗಳೇನು; | ಕೊಡಗು ಜಿಲ್ಲೆಯಲ್ಲಿನ 73 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಹಾಗೂ 03 ಪಿಕಾರ್ಡ್ ಬ್ಯಾಂಕುಗಳ ಮುಖಾಂತರ ರೈತರಿಗೆ ಈ ಕೆಳಕಂಡ ಸಾಲ ಸೌಲಭ್ಯಗಳನ್ನು ನೀಡಲಾಗುತ್ತಿದೆ.<br>1. ರೂ.3.00 ಲಕ್ಷಗಳವರೆಗೆ ಶೂನ್ಯ ಬಡ್ಡಿ ದರದಲ್ಲಿ ಅಲ್ಪಾವಧಿ ಬೆಳೆ ಸಾಲ ಹಾಗೂ ರೂ.2.00 ಲಕ್ಷಗಳವರೆಗೆ ಶೂನ್ಯ ಬಡ್ಡಿ ದರದಲ್ಲಿ ಪಶುಸಂಗೋಪನೆ ಮತ್ತು ಮೀನುಗಾರಿಕೆ ಚಟುವಟಿಕೆಗಳಿಗೆ ದುಡಿಯುವ ಬಂಡವಾಳವಾಗಿ ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಾಲ ಒದಗಿಸಲಾಗುತ್ತಿದೆ.<br>2. ರೂ.10.00 ಲಕ್ಷಗಳವರೆಗೆ ಶೇ.3 ರ ಬಡ್ಡಿ ದರದಲ್ಲಿ ಮಧ್ಯಮಾವಧಿ ಮತ್ತು | | |

<table>
<tr><td></td><td></td><td>ದೀರ್ಘಾವಧಿ ಕೃಷಿ/ಕೃಷಿ ಸಂಬಂಧಿತ ಸಾಲ, ತುಂತುರು ನೀರಾವರಿ ಸಾಲ, ಕೃಷಿ ಯಂತ್ರೋಪಕರಣ ಖರೀದಿ ಸಾಲ, ಟ್ರಾಕ್ಟರ್/ಟಿಲ್ಲರ್ ಖರೀದಿ ಸಾಲ, ಗೋದಾಮು/ಕಣ ನಿರ್ಮಾಣ ಸಾಲ, ಕೆರೆ ನಿರ್ಮಾಣ ಸಾಲ, ಸೋಲಾರ್ ಉಪಕರಣಗಳ ಅಳವಡಿಕೆಗೆ, ಹೆಚ್‌ಡಿಪಿ ಪೈಪ್ ಲೈನ್ ಅಳವಡಿಕೆಗೆ, ಬೋರ್‌ವೆಲ್ ಕೊರೆಯಲು, ಹೈನುಗಾರಿಕೆ/ಮೀನುಗಾರಿಕೆ ಮತ್ತು ಹಂದಿ/ಕುರಿ/ಕೋಳಿ ಸಾಗಾಣಿಕೆಗೆ ಪ್ರಾಜೆಕ್ಟ್ ಆಧಾರಿತ ಸಾಲ ನೀಡಲಾಗುತ್ತಿದೆ.</td></tr>
<tr><td>ಈ)</td><td>ಪ್ರಸಕ್ತ ಆರ್ಥಿಕ ವರ್ಷದಲ್ಲಿ ಇದುವರೆಗೂ ಎಷ್ಟು ರೈತರಿಗೆ ಸಾಲದ ಹಣವನ್ನು ವಿತರಣೆ ಮಾಡಲಾಗಿದೆ;</td><td>2021-22ನೇ ಆರ್ಥಿಕ ವರ್ಷದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಹಾಗೂ ಪಿಕಾರ್ಡ್ ಬ್ಯಾಂಕುಗಳ ಮುಖಾಂತರ ದಿನಾಂಕ: 28-02-2022 ರ ಅಂತ್ಯಕ್ಕೆ ಇದ್ದಂತೆ ಒಟ್ಟು 38,006 ರೈತರಿಗೆ ರೂ. 64,343.70 ಲಕ್ಷಗಳ ಸಾಲವನ್ನು ವಿತರಿಸಲಾಗಿರುತ್ತದೆ.<br>ಸಾಲ ವಿತರಿಸಿದ ವಿವರ ಈ ಕೆಳಕಂಡಂತಿದೆ.<br>(ರೂ. ಲಕ್ಷಗಳಲ್ಲಿ)
<table>
<tr><th>ಕ್ರ ಸಂ.</th><th>ಸಾಲದ ವಿವರ</th><th>ರೈತರ ಸಂಖ್ಯೆ</th><th>ವಿತರಿಸಿರುವ ಸಾಲದ ಮೊತ್ತ</th></tr>
<tr><td>1</td><td>ಅಲ್ಪಾವಧಿ ಬೆಳೆ ಸಾಲ</td><td>36012</td><td>59493.79</td></tr>
<tr><td>2</td><td>ಮಧ್ಯಮಾವಧಿ ಕೃಷಿ/ಕೃಷಿ ಸಂಬಂಧಿತ ಸಾಲ</td><td>908</td><td>3425.78</td></tr>
<tr><td>3</td><td>ಹೈನುಗಾರಿಕೆ ಸಾಲ</td><td>168</td><td>25.92</td></tr>
<tr><td>4</td><td>ಮೀನುಗಾರಿಕೆ ಸಾಲ</td><td>6</td><td>9.00</td></tr>
<tr><td>5</td><td>ದೀರ್ಘಾವಧಿ ಕೃಷಿ/ಕೃಷಿ ಸಂಬಂಧಿತ ಸಾಲ</td><td>912</td><td>1389.21</td></tr>
<tr><td colspan="2">ಒಟ್ಟು</td><td>38006</td><td>64343.70</td></tr>
</table></td></tr>
<tr><td>ಉ)</td><td>ಸಾಲ ಸೌಲಭ್ಯ ಪಡೆಯಲು ಅರ್ಜಿ ಸಲ್ಲಿಸಿದ್ದರೂ ಇದುವರೆಗೆ ಸಾಲ ದೊರೆಯದಿರುವ ರೈತರುಗಳ ಸಂಖ್ಯೆ ಎಷ್ಟು; (ಸಾಲ ದೊರೆಯದಿರಲು ಕಾರಣಗಳೇನು)</td><td>ಅಂತಹ ಪ್ರಕರಣಗಳು ವರದಿಯಾಗಿರುವುದಿಲ್ಲ.</td></tr>
</table>

**ಸಂಖ್ಯೆ: ಸಿಒ 149 ಸಿಎಲ್‌ಎಸ್ 2022**

(ಎಸ್.ಟಿ. ಸೋಮಶೇಖರ್)
**ಸಹಕಾರ ಸಚಿವರು**